# ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬಸವನ-ಬಾಗೇವಾಡಿ

**ಸಾಕ್ಷಿಗೆ ದಿನಾಂಕ 23.06.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ. ಎಸ್.ಆರ್.ಜಿ. ವಕೀಲರಿಂದಃ-**

1. ನನ್ನ ತಾಯಿಯ ಹೆಸರ ನೀಲಬಾಯಿ. ನನ್ನ ತಾಯಿ ಉಮಲು ಬಾಮಲು ನಾಯಕ ರವರು ಮಗಳು ಎಂದರೆ ಸರಿ. ಉಮಲು ಬಾಮಲು ನಾಯಕ ರವರು ಸಿ.ಸಿ. ನಂ.612/2023 ನು ಆರೋಪಿಯ ದಾಖಲಿಸಿರುತ್ತಾರೆ ಎಂದರೆ ಸರಿ. ಪಿರ್ಯಾದಿದಾರನಿಗೆ ಉಮಲು ನಾಯಕ ರವರು ಚಿಕ್ಕಪ್ಪನಾಗಬೇಕೆಂದರೆ ಸರಿ. ಪಿರ್ಯಾದಿಯು ನನಗೆ ಸದೋರ ಮಾವನಾಗಬೇಕೆಂದರೆ ಸರಿ.

2. ನಾನು ಬಿ.ಎ. ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಊರು ಕರಿಹಳ್ಳ ಲಮಾಣಿ ತಾಂಡ. ಪಿರ್ಯಾದಿಯು ಕೂಲಿ ಕೆಲಸ ಮಾಡಿಕೊಂಡಿರುತ್ತಾನೆ. ಕೂಲಿ ಕೆಲಸದಿಂದ ತಿಂಗಳಿಗೆ ಎಷ್ಟು ಗಳಿಸುತ್ತಾನೆ ಎಂದು ನನಗೆ ಗೊತ್ತಿಲ್ಲ. ಪಿರ್ಯಾದಿಯು ತನ್ನ ಮನೆತನಕ್ಕೆ ಸಂಬಂಧಪಟ್ಟ ಎಷ್ಟು ಆಸ್ತಿಗಳನ್ನು ಮಾರಾಟ ಮಾಡಿರುತ್ತಾನೆ ಎಂದು ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಒಬ್ಬ ವ್ಯಕ್ತಿಯು ತನಗೆ ಎಷ್ಟು ಹಣದ ಅಡಚಣೆ ಇರುತ್ತದಯೋ ಅಷ್ಟೆ ಆಸ್ತಿಯನ್ನು ಮಾರಾಟ ಮಾಡುತ್ತಾನೆ ಎಂದರೆ ಸರಿ. ನಾನು ಕೂಲಿ ಕೆಲಸ ಮಾಡಿಕೊಂಡು ಇರುತ್ತೇನೆ.

3. ಪಿರ್ಯಾದಿಯು ಆರೋಪಿಗೆ 9 ಲಕ್ಷ ರೂಪಾಯಿ ಸಾಲವನ್ನು ನೀಡಿರುತ್ತಾನೆ, ದಿನಾಂಕ ನೆನಪಿರುವುದಿಲ್ಲ. IDFC ಬ್ಯಾಂಕಿನ ಎದುರುಗಡೆ ನೀಡಿರುತ್ತಾನೆ, ಆಗ ಸಮಯ 12-00 ರಿಂದ 12-30 ಗಂಟೆ ಆಗಿರುತ್ತದೆ. ಸದರಿ ಹಣವನ್ನು ನೀಡುವಾಗ ನಾನು, ಆರೋಪಿ, ಪಿರ್ಯಾದಿ, ರಮೇಶ ರಾಠೋಡ ಹಾಜರಿದ್ದೇವು. ಆರೋಪಿಯು ಯಾವ

ದಿನಾಂಕದಿಂದು ಪಿರ್ಯಾದಿಗೆ ಹಣ ಕೇಳಿರುತ್ತಾನೆ ಎಂದು ನನಗೆ ನೆನಪಿಲ್ಲ, ಹಿಟಾಚಿಯ ಸಾಲದ ಬಡ್ಡಿ ತುಂಬಲು ಮತ್ತು ಹೊಲ ಖರೀದಿ ಮಾಡಲು ಪಡೆದುಕೊಂಡಿರುತ್ತಾನೆ.

4. ಆರೋಪಿಗೆ ಹಣವನ್ನು ಚೆಕ್ಕ ಮೂಲಕ ನೀಡಬಹುದಿತ್ತು ಎಂದು ಎಂದರೆ ಸಾಕ್ಷಿಯು ನಗದು ಮೂಲಕವೆ ಕೊಟ್ಟಿರುತ್ತಾನೆ ಎಂದು ನುಡಿಯುತ್ತಾರೆ. 20,000/- ಕ್ಕಿಂತ ಮೇಲ್ಪಟ್ಟು ಹಣವನ್ನು ನಗದು ವ್ಯವಹಾರ ಮಾಡಬಾರದು ಎಂದು ಗೊತ್ತಿರುತ್ತದೆ. ಆರೋಪಿಯು 3-4 ತಿಂಗಳಲ್ಲಿ ಹಣವನ್ನು ಹಿಂದುಗಿಸಿರುತ್ತಾನೆ ಎಂದು ತಿಳಿಸಿರುತ್ತಾನೆ. ಆರೋಪಿಗೆ ಪಿರ್ಯಾದಿಯು ನನ್ನ ಸಮಕ್ಷಮ ಹಣ ಹಿಂದುರುಗಿಸಬೇಕೆಂದು ಕೇಳಿರುವುದಿಲ್ಲ. ಆರೋಪಿಯು ಪಿರ್ಯಾದಿಗೆ ಚಕ್ಕ ನೀಡಿದ ಬಗ್ಗೆ ನನಗೆ ಗೊತ್ತಿಲ್ಲ. ಹಣ ನೀಡುವ ಸಮಯದಲ್ಲಿ ಪಿರ್ಯಾದಿ ನನಗೆ ಕರೆದಿರುತ್ತಾನೆ.

5. ಹಿಟಾಚಿಯಿಂದ ಸಾಲ ಎಷ್ಟಿ ಇತ್ತು ಮತ್ತು ಹೊಲ ಖರೀದಿಗೆ ಎಷ್ಟು ಹಣ ಬೇಕಾಗಿತ್ತು ಎಂದು ನನಗೆ ಗೊತ್ತಿಲ್ಲ. ರಮೇಶ ರಾಠೋಡ ಜೀವಂತ ಇರುತ್ತಾರೆ. ಈ ವ್ಯವಹಾರವನ್ನು ಹೊರತುಪಡಿಸಿ ಬೇರೆ ವ್ಯವಹಾರ ಮಧ್ಯಸ್ಥಿಕೆ ಮಾಡಿರುವುದಿಲ್ಲ. ನಾನು ರಾಮಲು ರವರ ಅಳಿಯನಾಗಿದ್ದು, ಉಮಲು ರವರ ಮೊಮ್ಮಗನಾಗಿರುವ ಕಾರಣ ಪಿರ್ಯಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6. ಪಿರ್ಯಾದಿಯ ಖಾತೆಯಲ್ಲಿ ಎಷ್ಟು ಹಣ ಇತ್ತು ಎಂದು ನನಗೆ ಗೊತ್ತಿಲ್ಲ. IDFC ಬ್ಯಾಂಕಿನಲ್ಲಿ ಹಣ ಇತ್ತು. ಸದರಿ ಬ್ಯಾಂಕಿನ ಖಾತೆಯಲ್ಲಿ ಎಷ್ಟು ಜನರಿಗೆ ಪಾಲು ಇತ್ತು ಎಂದು ನನಗೆ ಗೊತ್ತಿಲ್ಲ. ನಾನು ಹಣವನ್ನು ಎನಿಕೆ ಮಾಡಿರುವುದಿಲ್ಲ, ರಾಮು ಮತ್ತು ರಮೇಶ ಎನಿಕೆ ಮಾಡಿರುತ್ತಾರೆ. ನಾನು ಎನಿಕೆ ಮಾಡಿಲ್ಲದ ಕಾರಣ ನನಗೆ ನಿರ್ಧಿಷ್ಟವಾಗಿ ಎಷ್ಟು ಹಣ ಇರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ, ಪಿರ್ಯಾದಿಯ ಹೇಳಿದ

ಮೇರೆಗೆ ಹೇಳುತ್ತಿದ್ದೇನೆ ಎಂದರೆ ಸರಿ. ಪಿರ್ಯಾದಿಯು ಆರೋಪಿಗೆ ನನ್ನ ಸಮಕ್ಷಮ ಯಾವುದೇ ಹಣ ನೀಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ. ಅಮೀತ್ ಘಟ್ಟಿ )**
**ದಿವಾಣಿ ನ್ಯಾಯಾಧೀಶರು ಮತ್ತು**
**ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**